# ಎರಡು ಆಪ್ತ ಪ್ರತಿಕ್ರಿಯೆಗಳು

## ವಿಸ್ತರಿಸಿದ 'ನನ್ನ ಜಗತ್ತು'

ಬೇವು–ಬೆಲ್ಲದ ಹಬ್ಬಕ್ಕೆ ಮುನ್ನುಡಿಯ ರೂಪದಲ್ಲಿ ಕೈ ಸೇರಿದ 'ಸುಧಾ ಯುಗಾದಿ ಸಂಚಿಕೆ'ಯನ್ನು 'ತರುಣ ತರುಣಿಯರ ವಿಶೇಷಾಂಕ' ಎನ್ನುವುದೇ ಹೆಚ್ಚು ಸರಿ. ವಸಂತ ಸುಡುಬಿಸಿಲಿನಲ್ಲೂ ಚಿಗಿತಿದ್ದಾನಲ್ಲ ಎನ್ನುವ ಆಶ್ಚರ್ಯಕ್ಕೆ ಪ್ರಕೃತಿ ಇನ್ನೂ ಗುಟ್ಟು ಬಿಟ್ಟುಕೊಟ್ಟಿಲ್ಲ. ಈ ಚಿಗುರಿನ ಅದಮ್ಯ ವಿಶ್ವಾಸದ ರೂಪದಲ್ಲಿ ನಮ್ಮ ಹೊಸ ತಲೆಮಾರಿನ ಉತ್ಸಾಹ, ಲವಲವಿಕೆ ಬರವಣಿಗೆಯಲ್ಲಿ ಕೂಡ ಹೊಮ್ಮಿದೆ, ಇದು ಸಾಹಿತ್ಯಪ್ರಕೃತಿಯ ಹೊಸನೆಲೆ.

'ನನ್ನ ಅಧ್ಯಾತ್ಮ' ಬರಹಗಳು ಯುಗಾದಿ ಸಂಚಿಕೆಯಲ್ಲಿ ವಿಶೇಷವಾಗಿ ನನ್ನ ಗಮನ ಸೆಳೆದವು. ಸಾವಿರಾರು ವರ್ಷಗಳಿಂದ ಗೂಡುಕಟ್ಟಿಕೊಂಡಿದ್ದ ಹೇಳಿಕೆಗಳನ್ನು ನಮ್ಮ ತರುಣ ತರುಣಿಯರು ಇರುವೆಯ ಸುತ್ತಿಗೆಯಿಂದ ಸಲೀಸಾಗಿ ಉರುಳಿಸಿದ್ದಾರೆ. ಹನ್ನೆರಡನೇ ಶತಮಾನದ ಕಾಯಕ ತತ್ವ ಅನೇಕರಿಗೆ ಇನ್ನೂ ಅರ್ಥವಾಗದಿರುವುದು ಅಥವಾ ಅರ್ಥವಾದರೂ ಅದನ್ನು ಕೊಳ್ಳುಬಾಕ ವಸ್ತುವನ್ನಾಗಿ ಮಾರ್ಪಡಿಸಿರುವುದು ವ್ಯಂಗ್ಯವೇ ಸರಿ. ಶತಮಾನಗಳಿಂದಲೂ ಜನ ಉಸಿರಾಡುತ್ತಿದ್ದಾರೆ. ಆದರೆ, ಈಗ 'ನೀವು ಉಸಿರಾಡಿ... ಉಸಿರಾಡಿ...' ಎಂದು ಹೇಳಿಕೊಡುವವರು ಬಂದಿದ್ದಾರೆ. ಇದು ಜಗತ್ತಿನ ಎಷ್ಟನೇ ಆಶ್ಚರ್ಯ ತಿಳಿಯದಾಗಿದೆ.

ನನಗೆ ಇಷ್ಟವಾದ ಕವಿತೆಗಳನ್ನು ಓದಿದೆ. ರಮೇಶ ಅರೋಲಿಯವರ ಕವಿತೆ ಓದಿದಾಗ ಕಳೆದ ಎರಡು ವರ್ಷಗಳ ಹಿಂದೆ ಧಾರವಾಡದಲ್ಲಿ ನಡೆದ 'ಬೇಂದ್ರೆ ಯುವ ಪುರಸ್ಕಾರ' ಕಾರ್ಯಕ್ರಮದಲ್ಲಿ ಜಯಪ್ರಕಾಶ ಮಾವಿನಕುಳಿ ಅವರು ಹೇಳಿದ ಮಾತು ನೆನಪಾಯಿತು – 'ಊರ ಜನ ಮಾತನಾಡಿಕೊಳ್ಳುತ್ತಾರೆ, ಇಂತಹ ಕವಿ ನಮ್ಮಲ್ಲಿ ಇರಬೇಕಾದರೆ ನಾವೇಕೆ ಹೆದರಬೇಕು ಅಂತ.' ಕವಿ ಮತ್ತು ಕವಿತೆ ಒಂದು ಊರಿನ, ನಾಡಿನ ಎಚ್ಚರದ ಸಂಕೇತ ಎನ್ನುವುದು ಆ ಮಾತಿನ ಅರ್ಥ. 'ಪಾವು ಸಗಣೆಗೂ ದರ ತಂದ ಈ ಶಿಥಿಲ ಚೈತ್ರಕೆ/ ಕೊಟ್ಟಿಗೆ ದನದ ಕತೆ ನೋಣ ಕೇಳದ ಗಲ್ಲಿಯಲಿ/ ಈ ಕಿವುಡರಿಬ್ಬರ ನುಡಿಗಳಾದರೂ ಚಿಗುರಿವೆಯಲ್ಲ/ ಬಿಡು ಸಾಕು ಇಷ್ಟು ಈ ಕೇಡುಗಾಲಕ್ಕೆ!' ಎನ್ನುವ ಸಾಲುಗಳು ಈ ಕಾಲಕ್ಕೆ ಕವಿಯೊಬ್ಬನ ವಿಶಿಷ್ಟ ಪ್ರತಿಕ್ರಿಯೆಯಂತಿದೆ.

ಪ್ರಬಂಧ ಸ್ಪರ್ಧೆಯ ಬಹುಮಾನಿತ ಪ್ರಬಂಧಗಳು ಸೊಗಸಾಗಿವೆ. ಜೊತೆಗೆ, ಆ ಪ್ರಬಂಧಗಳ ತೀರ್ಪುಗಳೇ ಸುಂದರ ಪ್ರಬಂಧಗಳಂತೆ ಓದಿಸಿಕೊಳ್ಳುತ್ತವೆ.

ಅಂಬೇಡ್ಕರ್ ಮತ್ತು ಗಾಂಧಿಯವರನ್ನು ಸಮಕಾಲೀನವಾಗಿ ನೋಡುವ ಪ್ರಯತ್ನದ ಬರಹಗಳು ತುಂಬಾ ಇಷ್ಟವಾದವು. 'ಈ ಕಾಲಕ್ಕೂ ಕೊನೆಯಿಲ್ಲದ ಗಾಂಧಿದಾಹ' ಲೇಖನವನ್ನು ಓದಿದಾಗ, ಇತ್ತೀಚೆಗೆ ಓದಿದ ಡಾ. ಪ್ರಭಾಕರ ಅವರ 'ಕಸ್ತೂರಬಾ' ಕಾದಂಬರಿ ಓದಿದ್ದು ನೆನಪಾಯಿತು. ಆ ಕಾದಂಬರಿಯನ್ನು ಓದಿ ನಾನೊಂದು 'ಮಹಾರ್ ಕೇರಿಯಲ್ಲಿ ಮಗುವಾದ ಮಹಾತ್ಮ' ಎನ್ನುವ ಕವಿತೆ ಬರೆದದ್ದೂ ನೆನಪಾಯಿತು.

ಇಡೀ ವಿಶೇಷಾಂಕ ಕೆ.ವಿ. ಸುಬ್ಬಣ್ಣನವರು ಹೇಳಿದಂತೆ, 'ನನ್ನ ಜಗತ್ತನ್ನು' ವಿಸ್ತರಿಸಿದ, ನನ್ನ ಕನ್ನಡವನ್ನು ವಿಸ್ತರಿಸಿದ ಸಂಚಿಕೆ.

–ಸುಬ್ಬು ಹೊಲೆಯಾರ್




## ಹೊಸಬರ ನುಡಿಹಾರ

ಚೈತ್ರವೆಂದರೆ ಚಿಗುರು. ಹೊಸನೋಟದ ಸ್ವಾಗತವೇ ಯುಗಾದಿ. ಬಹುತೇಕ ಹೊಸಬರ ನುಡಿಹಾರದಿಂದಲೇ ಮೈತುಂಬಿಕೊಂಡ 'ಸುಧಾ ಯುಗಾದಿ ವಿಶೇಷಾಂಕ' ನನಗೆ ಬಹು ಅರ್ಥಪೂರ್ಣವಾಗಿ ಕಂಡಿದೆ. ಅದರಲ್ಲೂ ಮಕ್ಕಳ ವಿಭಾಗದಿಂದಲೇ ಪ್ರಾರಂಭಗೊಂಡ ಸಂಚಿಕೆ ನಿಜಾರ್ಥದಲ್ಲಿ ಹೊಸ ಅತಿಥಿಗಳನ್ನು ಸ್ವಾಗತಿಸುವ ತಳಿರು ತೋರಣವಾಗಿದೆ.

ದೇಶದ ಎರಡು ದೀಪಸ್ತಂಭಗಳಾದ ಅಂಬೇಡ್ಕರ್ ಹಾಗೂ ಮಹಾತ್ಮಗಾಂಧಿಯವರ ಚಿಂತನೆಗಳ ಅವಶ್ಯಕತೆ ಮತ್ತು ಅವಸ್ಥೆಗಳ ಅವಲೋಕನ ಸದ್ಯದ ಜರೂರತ್ತಾಗಿದೆ. ಮೌಲ್ಯಗಳ ಮೂಲ ಅರ್ಥವನ್ನೇ ತಿರುಚಿ ಅನುಕೂಲಸಿಂಧು ತತ್ವಗಳ ಮೂಲಕ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಬದುಕು ಭ್ರಷ್ಟತೆಯತ್ತ ಜಾರುತ್ತಿರುವ ಸದ್ಯವನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. 'ಅಧ್ಯಾತ್ಮ ಕಣ್ಮರೆಯಾಗುತ್ತಿದೆ' ಎಂಬ ರಾಮದಾಸ ಪ್ರಭುಗಳ ಕಳವಳಕ್ಕೆ, 'ನನ್ನ ಅಧ್ಯಾತ್ಮ'ಕ್ಕೆ ಯುವಮನಸ್ಸುಗಳು ತಲ್ಲಣಿಸಿರುವುದು ಕನ್ನಡಿಯಾಗಿದೆ.

ಕಥಾತಂತ್ರದಿಂದ ಮಂಜುನಾಯಕ ಚಳ್ಳೂರರ 'ಫೂ' ಕತೆ ಗಮನ ಸೆಳೆದರೆ, ಹೊಸ ವಸ್ತುವಿನ ಮೂಲಕ ಶಾಂತಿ ಅಪ್ಪಣ್ಣ ಗಮನಸೆಳೆಯುತ್ತಾರೆ. ತಂತ್ರ ಮತ್ತು ವಸ್ತುಗಳೆರಡರ ಆಧುನಿಕತೆಯ ಬೆಸುಗೆ ನಮ್ಮ ಯುವ ಕತೆಗಾರರ ಸದ್ಯದ ಸವಾಲೆನ್ನಿಸುತ್ತದೆ.

ಹರೆಯದ ಸಹಜ ಹಪಾಹಪಿಯಂತೆ ದೈಹಿಕ ಮಿಲನದ ಕನಸು–ಕನವರಿಕೆಗಳು ಯುವಕವಿಗಳನ್ನು ಸೆಳೆದಿವೆ. 'ಪೊಟರೆಯೊಳಗೆ ಎರಡು ಗಿಳಿಯಾದರೂ ಬಿಗಿದಪ್ಪಿವೆಯಲ್ಲ, ಬಿಡು ಸಾಕು ಇಷ್ಟು ಕೇಡುಗಾಲಕೆ!' ಎನ್ನುವ ರಮೇಶ್ ಅರೋಲಿಯವರ ಧ್ವನಿಯಲ್ಲಿರುವ ಕಳವಳ ಮತ್ತು ನೆಮ್ಮದಿಗಳೆರಡೂ ಎಲ್ಲ ಕವಿತೆಗಳಲ್ಲಿ ಬೇವು–ಬೆಲ್ಲದಂತೆ ಸಮ್ಮಿಶ್ರಗೊಂಡಿವೆ.

ಸದ್ಯದ ಸ್ಥಿತಿಯ ಫೋಟೊಗಳೊಡನೆ, ಕಲಬುರ್ಗಿ ನಗರದ ಐತಿಹಾಸದ ವೈಭೋಗದ ಲೇಖನ ಈ ಸಂಚಿಕೆಯ ನಿಜವಾದ ಹೈಲೈಟ್ ಆಗಿದೆ. ಹಳೆಯ ಸಂಭ್ರಮಕ್ಕೆ ಹೆಮ್ಮೆ ಪಡಬೇಕೋ, ಹೊಸತಕ್ಕೆ ಕಳವಳ ಪಡಬೇಕೋ ಎಂಬುದು ಎಲ್ಲ ಲೇಖಕರ ಧ್ವನಿಯೇ ಆಗಿದೆ. ಅದು ಪ್ಯಾಪಿಲಾನ್‌ರ 'ರೂಟುಗಳು ಮತ್ತು ರೌಟುಗಳು' ಲೇಖನದಲ್ಲಿ ಸ್ಪಷ್ಟವಾಗಿ ಪ್ರತಿಧ್ವನಿಗೊಂಡಿದೆ.

ಉತ್ಪ್ರೇಕ್ಷೆಗೊಳಿಸದೆ ಬದುಕನ್ನು ಮುದದಿಂದ ಕಾಣುವ ಜರೂರತ್ತು ಸದ್ಯದ ಎಲ್ಲಾ ಕನ್ನಡ ಲೇಖಕರದಾಗಿದೆ. ಆ ಮನೋಭಾವ ಮೂರೂ ಲಲಿತ ಪ್ರಬಂಧಗಳಲ್ಲಿ ವ್ಯಕ್ತವಾಗಿರುವುದು ನೆಮ್ಮದಿಯನ್ನು ನೀಡುತ್ತದೆ. 'ಸುಧಾ' ಬಳಗದ ವಾರ್ಷಿಕ ಯುವನುಡಿ ಸಂಗ್ರಹಕ್ಕೆ ಅಭಿನಂದನೆ.

–ವಸುಧೇಂದ್ರ

ॐ ✝ ☪ ಸರ್ವೇಜನಃ ಸುಖಿನೋ ಭವಂತು ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.